ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ನಾಯಕರ ಈಗಾಗಲೇ ಎಲ್ಲದಕ್ಕೂ ಉತ್ತರ ಕೊಟ್ಟಿದ್ದಾರೆ. ತಾವು ಒಬ್ಬರಿಗೆ ಏನಾದರೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಹಾಗೆಯೇ ಎಲ್ಲರಿಗೂ ಕೂಡ ಅವಕಾಶ ಕೊಡಬೇಕಾಗುತ್ತದೆ. ಇವರು ಕ್ಲಾರಿಫಿಕೇಷನ್ ಕೇಳದೇ ಬರೀ ಭಾಷಣವನ್ನು ಮಾಡಿಕೊಂಡು ಹೋಗುತ್ತಿದ್ದಾರೆ.

MADAM DEPUTY SPEAKER.—Hon. Member can seek only clarification.

SRI D. DEVARAJ URS.—I have noted down all the points. Why do you raise them again ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲಾ. ಎರಡೇ ಪಾಯಿಂಟ್ಸ್ ಮಾತ್ರ ಹೇಳುತ್ತೇನೆ. ನಾನು ಬೆಂಗಳೂರು ಆರಮನೆಯ ವಿಚಾರ ಕೇಳಿದ್ದೆ ಅದಕ್ಕೆ ಉತ್ತರ ಕೊಟ್ಟಿಲ್ಲಾ. ಮತ್ತು ಇವರು ಕಾಂಗ್ರೆಸ್ ಪ್ರೆಸಿಡೆಂಟ್ ಆಗಿರುವುದರಿಂದ ಇಲ್ಲಿ ಮುಖ್ಯ ಮಂತ್ರಿಗಳಾಗಿ ಮುಂದುವರೆದುಕೊಂಡು ಹೋಗುವುದಕ್ಕಾಗುವುದಿಲ್ಲ; ಅವರು ರಾಜೀನಾಮೆ ಕೊಡಬೇಕು ಎಂದು ಹೇಳಿದ್ದಕ್ಕೆ ಸರಿಯಾದ ಉತ್ತರ ಇಲ್ಲಾ. ಇನ್ನು ಆರೋಗ್ಯ ಇಲಾಖೆಯ ವಿಚಾರ ಮತ್ತು ವಿದ್ಯಾ ಇಲಾಖೆಯ ವಿಚಾರ ಪ್ರಸ್ತಾಪ ಮಾಡಿದ್ದೇನೆ, ಅದಕ್ಕೂ ಉತ್ತರ ಇಲ್ಲ. ಇನ್ನು ಶ್ರೀಮಾನ್ ದೇವೇಗೌಡರು ಸಿ.ಒ.ಡಿ. ಎನ್‌ಕ್ವೈರಿ ಬಗ್ಗೆ ಮಂತ್ರಿಗಳ ವಿಚಾರದ ಬಗ್ಗೆ ಹೇಳಿದ್ದಾರೆ.

ಹೈಕೋರ್ಟಿಗೆ ಅಪಾಲಾಜಿ ಕೊಟ್ಟಂಥಾ ಮಂತ್ರಿಗಳನ್ನು ಮುಂದುವರೆಸಬಾರದು ಅನ್ನುವ ವಿಚಾರ ಹೇಳಿದ್ದಾರೆ. ಇನ್ನೂ ಅನೇಕ ರೀತಿಯಲ್ಲಿ ಬೇರೆ ಬೇರೆ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಧ್ಯಕ್ಷರೇ, ಅವರಿಗೆ ಹೀಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾ ಹೋದರೆ ನಾವೂ ಕೂಡ ಮಾತನಾಡಬೇಕಾಗುತ್ತದೆ. ನಮಗೆ ತಾವು ಅವಕಾಶ ಕೊಡಬೇಕಾಗತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಹೇಳುವುದಕ್ಕೆ, ಹೋಗುವುದಿಲ್ಲಾ. ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಹೆಚ್ಚು ವಿಷಯಗಳು ಜನಗಳ ವಿಚಾರದಲ್ಲಿ ಹೇಳುವುದಕ್ಕೆ, ಮಾತನಾಡಲಿಕ್ಕೆ ನಮಗೆ ಅವಕಾಶ ಸಿಗಲಿಲ್ಲಾ. ಅಲ್ಲದೇ ಮಾನ್ಯ ಮುಖ್ಯಮಂತ್ರಿಗಳು ಇನ್ನೂ ಅನೇಕ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡದೇ ಇರುವುದರಿಂದಲೂ ಮತ್ತು ಅದರಲ್ಲೂ ಕೂಡ ಅನೇಕ ಶಾಸಕರನ್ನು ತಮ್ಮ ಕಡೆ ಒಲಿಸಿಕೊಂಡಿರುವುದರಿಂದಲೂ.....

(*Interruptions*)

ನಾನು ಇಷ್ಟು ಮಾತ್ರ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರ ನಮಗೆ ಸಮರ್ಪಕವಾಗಿಲ್ಲ. ಆದುದರಿಂದ ಈ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕುವುದರಲ್ಲಿ ಅರ್ಥ ಇಲ್ಲ ಎಂದು ಹೇಳುತ್ತೇನೆ.

(*Interruptions*)

ಅವರು ಸಮರ್ಪಕವಾದ ಉತ್ತರ ಕೊಟ್ಟಿಲ್ಲಾ. ಆದುದರಿಂದ ಇದನ್ನು ಮತಕ್ಕೆ ಹಾಕುವುದರಲ್ಲಿ ಅರ್ಥ ಇಲ್ಲ ಎಂದು ಹೇಳುತ್ತೇನೆ. ಮೇಲಾಗಿ ಅವರು ಪ್ರಜಾಪ್ರಭುತ್ವದ ಹರಣ ಮಾಡಿದ್ದಾರೆ ಎಂದು ನಾವು ಊಹಿಸಿಕೊಂಡು, ಅವರು ಕೊಟ್ಟಂಥಾ ಉತ್ತರ ಸಮರ್ಪಕವಾಗಿ ಇಲ್ಲದೇ ಇರುವುದರಿಂದ ನಾವು ಅದಕ್ಕೆ ಮನ್ನಣೆ ಕೊಡುವುದಿಲ್ಲ ಎಂದು ಹೇಳುತ್ತಾ ಈ ಸಭೆಯಿಂದನಾವುಗಳು ಸಭಾ ತ್ಯಾಗ ಮಾಡುತ್ತೇವೆ.

[ಕಾಂಗ್ರೆಸ್ (ಐ) ಸದಸ್ಯರೆಲ್ಲಾ ಸಭಾತ್ಯಾಗ ಮಾಡಿದರು]

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್‌ರೆ ಗುಂಡೂರಾಯರ ನೇತೃತ್ವದಲ್ಲಿ ನಡೆಯುತ್ತಾ ಇರತಕ್ಕಂಥಾ ಕಾಂಗ್ರೆಸ್ (ಐ) ಪಕ್ಷದ ಜನ ಇಲ್ಲಿ ಅವಿಶ್ವಾಸ ನಿರ್ಣಯ ತಂದು ಅದನ್ನು ಅವರು ಎದುರಿಸುವ ಶಕ್ತಿ ಕಡಿಮೆ ಆದುದನ್ನು ನೋಡಿ, ಅವರು ಈ ಮಾತುಗಳನ್ನು ಹೇಳುತ್ತಾ ಪಲಾಯನ ಮಾಡಿದ್ದಾರೆ. ಇದನ್ನು ಯಾರೂ ಒಪ್ಪತಕ್ಕದ್ದಲ್ಲ. ಆದು ಈ ಹಿಂದೆ ಜನತಾ ಪಕ್ಷದವರು ಯಾವುದೋ ಒಂದು ನೆಪ ಇಟ್ಟುಕೊಂಡು ಏನೋ ಹೋದರು ಅದು